# ಕರ್ನಾಟಕ ವಿಧಾನ ಪರಿಷತ್ತು

## ಲಘು ಪ್ರಕಟಣೆ ಭಾಗ - 2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಗುರುವಾರ, ದಿನಾಂಕ:10ನೇ ಜುಲೈ, 2025

ಸಂಖ್ಯೆ:26

ಕರ್ನಾಟಕ ವಿಧಾನಮಂಡಲ ಗ್ರಂಥಾಲಯವು 1933ರಲ್ಲಿ ಆರಂಭವಾಗಿ ಇಂದು ಅಪಾರವಾದ ಅತ್ಯಮೂಲ್ಯ ಗ್ರಂಥಗಳನ್ನು ಅಂದರೆ, ಭಾರತದ ಸಂವಿಧಾನ ರಚನಾ ಸಭೆಯ ನಡಾವಳಿಗಳು, ಕರ್ನಾಟಕ ವಿಧಾನಮಂಡಲದ ನಡಾವಳಿಗಳು, ಲೋಕಸಭೆ ಮತ್ತು ರಾಜ್ಯಸಭೆಯ ನಡಾವಳಿಗಳು, House of Lords/House of Commons ಸಂಪುಟಗಳು, ಜನಗಣತಿಯ ವರದಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಸಚಿವಾಲಯಗಳ ವರದಿಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಗೆಜೆಟಿಯರ್‌ಗಳು, ಸಮಿತಿಗಳ ಹಾಗೂ ಆಯೋಗಗಳ ವರದಿಗಳು, ಡಾ:ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬರವಣಿಗೆಗಳು, ಭಾರತದ ಮಹಾಪುರುಷರ ಆತ್ಮಚರಿತ್ರೆಗಳು ಹೀಗೆ ಸುಮಾರು 1,18,000 ಮಹತ್ವದ ಪುಸ್ತಕಗಳ ಸಂಗ್ರಹಗಳನ್ನು ಒಳಗೊಂಡಿದೆ. ವಿಧಾನಸೌಧ ಮತ್ತು ಶಾಸಕರ ಭವನದಲ್ಲಿ ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳ ಪರಾಮರ್ಶೆಗಾಗಿ ವಾಚನಾಲಯವಿದ್ದು, 19 ದಿನಪತ್ರಿಕೆಗಳು ಹಾಗೂ 41 ನಿಯತಕಾಲಿಕೆಗಳು ಓದಲು ಲಭ್ಯವಿರುತ್ತದೆ. ಇಂದು ತಂತ್ರಜ್ಞಾನ ಬೆಳೆದಂತೆ ಗ್ರಂಥಾಲಯಕ್ಕೆ ಆಧುನಿಕ ತಾಂತ್ರಿಕ ಸ್ಪರ್ಶ ನೀಡುವ ಉದ್ದೇಶದಿಂದ 2006ರಲ್ಲಿ "ಕರ್ನಾಟಕ ವಿಧಾನಮಂಡಲ ಇ-ಗ್ರಂಥಾಲಯ" ಎಂದು ಮರು ನಾಮಕರಣ ಮಾಡಲಾಗಿರುತ್ತದೆ.

ಅದರಂತೆಯೇ, ಇಂದು "Information on Your Fingertips" ಎಂಬ ತತ್ವದಡಿಯಲ್ಲಿ ಗ್ರಂಥಾಲಯದ ಓದುಗರ ಹಿತದೃಷ್ಟಿಯಿಂದ ಮತ್ತು ಗ್ರಂಥಾಲಯದಲ್ಲಿ ಲಭ್ಯವಿರುವ ವಿವಿಧ ರೀತಿಯ ಅತ್ಯಮೂಲ್ಯ ಸಂಗ್ರಹಗಳನ್ನು ಗ್ರಂಥಾಲಯ ಬಳಕೆದಾರರಿಗೆ ಒಂದೇ ಸೂರಿನಡಿ ಎಲ್ಲರಿಗೂ, ಎಲ್ಲೆಡೆಯೂ ಲಭ್ಯವಾಗುವಂತೆ ಮಾಡುವ ಪ್ರಮುಖ ಉದ್ದೇಶದಿಂದ ಗ್ರಂಥಾಲಯಕ್ಕೆ ಪ್ರತ್ಯೇಕವಾದ "Web Portal"ನ ವೆಬ್ ಲಿಂಕ್: (http://kla.kar.nic.in/assembly/elib/elib.html)ನ್ನು ರಚಿಸಿದ್ದು, ಕರ್ನಾಟಕ ವಿಧಾನ ಮಂಡಲದ ಮುಖ್ಯ ವೆಬ್-ಪುಟದಲ್ಲಿ ಅಳವಡಿಸಲಾಗಿದೆ. ಸದರಿ ವೆಬ್ ಪೋರ್ಟಲ್‌ನಲ್ಲಿ

...2.

ಪ್ರಮುಖವಾದ ಕನ್ನಡ ಮತ್ತು ಇಂಗ್ಲಿಷ್ ಇ-ದಿನಪತ್ರಿಕೆಗಳು, ಪ್ರತಿಭಾವಂತ ಸಂಸದೀಯ ಪಟು ಮಾಲಿಕೆಯಡಿ ಪ್ರಕಟಿಸಿರುವ ಎಲ್ಲಾ ಪುಸ್ತಕಗಳ ಇ-ಪ್ರತಿಗಳು(Soft Copy), ರಾಷ್ಟ್ರದ ಪ್ರಮುಖ ಗ್ರಂಥಾಲಯಗಳ ವೆಬ್ ಸೈಟ್‌ಗಳ ಡೈರೆಕ್ಟ್ ಹೈಪರ್ ಲಿಂಕ್‌ಗಳನ್ನು ಸಹ ಅಳವಡಿಸಲಾಗಿದೆ.

ಗ್ರಂಥಾಲಯ ವಿಜ್ಞಾನದ ಪಂಚ ಸೂತ್ರಗಳಲ್ಲಿ "Save the Time of the Reader" ಎನ್ನುವ 4ನೇ ಸೂತ್ರದನ್ವಯ ವಿಧಾನಮಂಡಲ ಇ-ಗ್ರಂಥಾಲಯದಲ್ಲಿ ಮಾನ್ಯ ಶಾಸಕರು, ಅಧಿಕಾರಿ/ನೌಕರರುಗಳಿಗೆ ಅಗತ್ಯ ಮಾಹಿತಿಯನ್ನು ಶೀಘ್ರದಲ್ಲಿ ಒದಗಿಸಿಕೊಡುವ ದೃಷ್ಟಿಯಿಂದ ಎನ್.ಐ.ಸಿ. ಇಂಡಿಯಾ, ಇವರು ಅಭಿವೃದ್ಧಿಪಡಿಸಿರುವ e-Granthalaya (In-house Library Operation Software) ತಂತ್ರಾಂಶದಲ್ಲಿ ವಿಧಾನಮಂಡಲದ ಇ-ಗ್ರಂಥಾಲಯದಲ್ಲಿರುವ ಎಲ್ಲಾ ಪುಸ್ತಕಗಳ ಮಾಹಿತಿಯನ್ನು ಅಳವಡಿಸಲಾಗಿದ್ದು, OPAC(Online Public Access Catlogue) ಪದ್ಧತಿಯ ಸಹಾಯದಿಂದ ಅವಶ್ಯವಿರುವ ಪುಸ್ತಕಗಳ ಲಭ್ಯತೆಯ ಮಾಹಿತಿಯನ್ನು ಅಂತರ್ಜಾಲದಲ್ಲಿ ಪಡೆದುಕೊಳ್ಳಬಹುದಾಗಿದೆ.

ಮೇಲ್ಕಂಡ ಸೌಲಭ್ಯವನ್ನು ಹೆಚ್ಚಿನ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳುವಂತೆ ವಿಧಾನಮಂಡಲ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾದ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರು ಸೂಚಿಸಿರುತ್ತಾರೆಂದು ಈ ಮೂಲಕ ಎಲ್ಲಾ ಮಾನ್ಯ ಶಾಸಕರುಗಳಿಗೆ ತಿಳಿಯಪಡಿಸಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು.

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.

**www.kla.kar.nic.in/council.htm**